ದರ್ಗಾಕ್ಕೆ ಹೋಗಿ ಗಂಧದ ಕಡ್ಡಿಯನ್ನು ಹಚ್ಚಿಸಿ ಸಿಹಿ ತಿಂಡಿಯನ್ನು ಎಲ್ಲರಿಗೂ ಹಂಚಿ ಅಲ್ಲಿರುವ ಮುಜಾವರ್‌ಗಳಿಗೆ ಕೈಲಾದಷ್ಟು ದುಡ್ಡು ಕೊಟ್ಟು, ತಂಗಿಯ ದಾಂಪತ್ಯ ಜೀವನ ಸುಖವಾಗಿರಲೆಂದು ಹಾರೈಸಿ ದುವಾ (ಪ್ರಾರ್ಥನೆ) ಮಾಡಿಯೆಂದು ಬೇಡಿಕೊಂಡ.

ಸಲೀಂ ತಂಗಿಯನ್ನು ಮಿತಿಮೀರಿ ಪ್ರೀತಿಸುತ್ತಿದ್ದ. ಶಕೀಲಾಳ ದಾಂಪತ್ಯ ಜೀವನ ಸುಖಮಯವಾಗಿರಬೇಕೆಂಬುದು ಅವನ ಬಯಕೆಯಾಗಿತ್ತು. ಹಾಗಾಗಿ, ಪ್ರತಿ ಶುಕ್ರವಾರ ದೇಶವಳ್ಳಿಯ ದರ್ಗಾಕ್ಕೆ ಭೇಟಿ ನೀಡುತ್ತಿದ್ದ.

ಸಲೀಂ ಎಷ್ಟು ಬಯಸುತ್ತಿದ್ದನೋ ಅಷ್ಟೇ ಶಕೀಲಾಳ ದಾಂಪತ್ಯದಲ್ಲಿ ಒಳ್ಳೆಯ ದಿನಗಳು ಬರುವ ಲಕ್ಷಣಗಳು ಇರಲಿಲ್ಲ. ರಸೂಲ್ ಅವಳನ್ನು ಕಾರಣವಿಲ್ಲದೆ ಪೀಡಿಸತೊಡಗಿದ. ಅವನು ಯಾಕಾಗಿ ಹೀಗೆ ಮಾಡುತ್ತಿದ್ದಾನೆ ಎಂದು ಅರ್ಥವಾಗುತ್ತಿರಲಿಲ್ಲ. ವಿಷಯ ಏನೆಂದರೆ ಅವನು ಅಷ್ಟಾಗಿ ಯಾರೊಂದಿಗೂ ಸೇರುತ್ತಿರಲಿಲ್ಲ. ಸಣ್ಣಪುಟ್ಟ ವಿಷಯಕ್ಕೆಲ್ಲ ಮನೆ ಮಂದಿಯೊಂದಿಗೆ ಜಗಳ ಮಾಡುತ್ತಿದ್ದ ಎಂದು ತಿಳಿದು ಶಕೀಲಾಳ ಮನೆಯವರು ಬೇಸರ ಪಟ್ಟುಕೊಂಡರು. ಎಂಥಾ ಎಡವಟ್ಟಾಗಿ ಹೋಯಿತು ಎಂದು ನೊಂದುಕೊಂಡರು.

ಗಂಡನ ಹಿಂಸೆ ತಾಳಲಾರದೆ ಅದೊಂದು ದಿನ ಶಕೀಲಾ ಒಬ್ಬಳೇ ಗಂಡನ ಮನೆಯಿಂದ ಬಂದು ಬಿಟ್ಟಳು. ಅವಳು ಬಂದ ಮಾರನೇ ದಿನವೇ ಅವಳ ಗಂಡನ ಕಡೆಯವರು ಬಂದು ಸಮಾಧಾನ ಮಾಡಿ ಕೂಡಿಕೊಂಡು ಕರೆದುಕೊಂಡು ಹೋದರು.

ಇದಾದ ಸ್ವಲ್ಪ ದಿನಕ್ಕೆ ಶಕೀಲಾ ತುಂಬಾ ಅಳುತ್ತಾ ಪುನಃ ಗಂಡನ ಮನೆಯಿಂದ ಬಂದು ಬಿಟ್ಟಳು. ಇನ್ನು ತನ್ನನ್ನೇನಾದರೂ ಕಳುಹಿಸಿದರೆ ತಾನು ಬದುಕಿಯುಳಿಯುವುದಿಲ್ಲ ಎಂದು ನೇರವಾಗಿಯೇ ಹೇಳಿಬಿಟ್ಟಳು. 'ಇನ್ನು ನಿನ್ನ ಕಳುಹಿಸುವುದಿಲ್ಲ. ನೀನು ಇಲ್ಲೇ ಇರು' ಎಂದು ಎಲ್ಲರೂ ಸಮಾಧಾನ ಮಾಡಿದರು.

ಶಕೀಲಾ ಎಷ್ಟೊಂದು ಹೆದರಿಕೊಂಡು ಇದ್ದಳೆಂದರೆ ಮನೆ ಮುಂದೆಯಿಂದ ಯಾರಾದರೂ ಹಾದು ಹೋದರೆ ತನ್ನ ಗಂಡನ ಕಡೆಯವರೇ ಬಂದು ಬಿಟ್ಟಿದ್ದಾರೆ ಎಂದು ಹೋಗಿ ಮೂಲೆ ಸೇರಿ ಕೊಳ್ಳುತ್ತಿದ್ದಳು. ಯಾರ ಹೆಜ್ಜೆಯ ಸಪ್ಪಳವನ್ನು ಸಹ ಸಹಿಸಿಕೊಳ್ಳಲು ಅವಳಿಂದ ಸಾಧ್ಯವಾಗುತ್ತಿರಲಿಲ್ಲ.

ಮಗಳು ಹೀಗೆ ಬೆಚ್ಚಿ ಬೀಳುತ್ತಿರುವುದನ್ನು ಗಮನಿಸಿ ಅವಳ ತಾಯಿ, ಅವಳನ್ನು ತನ್ನ ಪಕ್ಕದಲ್ಲೇ ಮಲಗಿಸಿಕೊಳ್ಳಲು ಪ್ರಾರಂಭಿಸಿದಳು.

ಈ ಮಧ್ಯೆ, ಶಕೀಲಾಳ ಮಾವನ ಕಡೆಯವರು ಬಂದು ಶಕೀಲಾಳನ್ನ ಕಳುಹಿಸಿಕೊಡಿ ಎಂದರು. 'ಹುಡುಗಿ ತುಂಬಾ ಹೆದರಿಕೊಂಡಿದ್ದಾಳೆ ಒಂದೆಂಡು ದಿನ ಹೋಗಲಿ ಆಮೇಲೆ ನೋಡೋಣ ಬನ್ನಿ' ಎಂದು ಅವರನ್ನು ಹಿಂದೆ ಕಳುಹಿಸಿದರು.

ಅದೊಂದು ದಿನ ಮುಂಜಾನೆ ಶಕೀಲಾಳ ತಾಯಿ ನೋಡಿದರೆ, ಅವಳ ಮಗ್ಗುಲಲ್ಲಿ ಮಲಗಿದ್ದ ಮಗಳು ಇರಲಿಲ್ಲ. ಅವಳೆಲ್ಲಿ ಹೋದಳೆಂದು ಅವರಿಗೆ ದಿಗಿಲಾಯಿತು. ಅವರು ಮನೆಯಿಂದ ಹೊರಬಂದು ಸುತ್ತಮುತ್ತ ನೋಡುತ್ತಿರುವಾಗ ಯಾರೋ ದೂರದಿಂದ ಓಡಿ ಬರುತ್ತಿರುವುದು ಗಮನಕ್ಕೆ ಬಂತು. ಓಡಿ ಬರುತ್ತಿರುವವರು ಅವರ ಮನೆಯ ಕಡೆಯೇ ಬಂದರು. ಶಕೀಲಾ ಅಳುತ್ತಾ ಕೆರೆ ಕಡೆ ಹೋಗುತ್ತಿರುವ ವಿಷಯ ಹೇಳಿದರು. ತಡೆದರೂ ನಿಲ್ಲಲಿಲ್ಲ ಎಂದರು.

ಸಲೀಂ ಮತ್ತು ಕಲೀಂ ಕೆರೆ ಕಡೆ ಓಡಿದರು. ಶಕೀಲಾಳ ಕೆಂಪು ದುಪ್ಪಟ್ಟಾ ಕೆರೆಯ ಏರಿಯ ಮೇಲೆ ಕಾಣಿಸಿಕೊಂಡಿತ್ತು.

ಈಜುಗಾರರು ಕೆರೆಗೆ ಇಳಿದು ಜಾಲಾಡಿದರು. ಎಷ್ಟೋ ಸಮಯದ ಬಳಿಕ ಶಕೀಲಾಳ ಹೆಣ ದೊರೆಯಿತು. ಅಷ್ಟೊತ್ತಿಗೆ ಇಡೀ ಊರಿಗೆ ಊರೇ ಕರೆ ಬಳಿ ಸೇರಿಕೊಂಡಿತ್ತು.

ಶಕೀಲಾ ತವರಿನಲ್ಲೇ ಕೆರೆಗೆ ಹಾರಿ ಪ್ರಾಣ ಬಿಟ್ಟಿರುವುದರಿಂದ ರಸೂಲ್ ಬಚಾವಾಗಿ ಹೋಗಿದ್ದ ನಿಜ. ಆದರೆ, ತನ್ನಿಂದ ಅವನು ಬಚಾವಾಗುವುದಿಲ್ಲ ಎಂದು ಸಲೀಂ ಯೋಚಿಸಿದ.

ಶಕೀಲಾಳ ಸಾವಿನ ನಂತರ ಇಡೀ ಮನೆ ಮಂದಿಯೆಲ್ಲಾ ಮಂಕಾಗಿ ಹೋಗಿದ್ದರು. ಎಲ್ಲರಿಗಿಂತ ಹೆಚ್ಚಾಗಿ ಸಲೀಂ. ಅವನು ಹಳ್ಳಿಗಳ ಕಡೆ ಹೋಗುವುದನ್ನು ನಿಲ್ಲಿಸಿಬಿಟ್ಟಿದ್ದ. ಯಾರೊಂದಿಗೂ ಸೇರುತ್ತಿರಲಿಲ್ಲ. ರಸೂಲ್‌ನನ್ನು ಮುಗಿಸುವವರೆಗೂ